ನಿವೇಶನಗಳನ್ನು ಹಸ್ತಾಂತರ ಮಾಡುವುದು

1793(2176); ಶ್ರೀ ಆನಂದ ಸಿಂಗ್

ಅ) ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದ ಸರ್ವೆ ನಂ: 165/1 ರ ಪೈಕಿ 2184 ಚ.ಮೀ. ನಿವೇಶನವನ್ನು ಹೊಸಪೇಟೆ ನಗರಸಭೆಗೆ ಲೋಕೋಪಯೋಗಿ ಇಲಾಖೆಯಿಂದ ಹಸ್ತಾಂತರಿಸುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ:

ಆ) ಸದರಿ ನಿವೇಶನವನ್ನು ಯಾವಾಗ ಹಸ್ತಾಂತರಿಸಲಾಗುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ : ಲೋಇ 561 ಬಿಎಂಎಸ್ 2012 ಬೆಂಗಳೂರು ದಿನಾಂಕ : 31–07–2014 ರಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದ ಸರ್ವೆ ನಂ.165/1 ರ ಪೈಕಿ 2184 ಚಮೀ ನಿವೇಶನವನ್ನು ನಿಗದಿಪಡಿಸಿರುವ ಮೌಲ್ಯ ₹ 3,56,12,356.00 ಗಳನ್ನು ಹೊಸಪೇಟೆ ನಗರಸಭೆಯಿಂದ ಪಾವತಿಸಿಕೊಂಡು, ಸದರಿ ನಿವೇಶನವನ್ನು ಸಾರ್ವಜನಿಕರ ಉಪಯೋಗಿ ಕಟ್ಟಡ ಸಂಕೀರ್ಣ ಕಟ್ಟಲು ಮಾತ್ರ ಉಪಯೋಗಿಸುವ ಮತ್ತು ಯಾವುದೇ ಖಾಸಗಿ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ನೀಡತಕ್ಕದ್ದಲ್ಲ ಎಂಬ ಷರತ್ತಿನೊಂದಿಗೆ ಹೊಸಪೇಟೆ ನಗರ ಸಭೆಗೆ ಹಸ್ತಾಂತರಿಸಲು ಆದೇಶ ನೀಡಲಾಗಿದೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪ ವಿಭಾಗ, ಹೊಸಪೇಟೆ ಇವರು ದಿನಾಂಕ: 06/12/2014 ಪತ್ರದಲ್ಲಿ ನಿವೇಶನ ಹಾಗೂ ಕಟ್ಟಡವನ್ನು ನಗರಸಭೆಗೆ ಹಸ್ತಾಂತರಿಸಲು ಸರ್ಕಾರದ ಆದೇಶದನ್ವಯ ಮೌಲ್ಯ ₹ 3,56,12,356.00 ಗಳನ್ನು ಪಾವತಿಸಲು ಪೌರಾಯುಕ್ತರು, ನಗರಸಭೆ, ಹೊಸಪೇಟೆ ಇವರಿಗೆ ತಿಳಿಸಿರುತ್ತಾರೆ.

ಆ) ಪೌರಾಯುಕ್ತರು, ನಗರಸಭೆ, ಹೊಸಪೇಟೆ ಇವರು ನಿವೇಶನ ಹಾಗೂ ಕಟ್ಟಡ ಮೌಲ್ಯ ₹ 3,56,12,356.00 ಗಳನ್ನು ಲೋಕೋಪಯೋಗಿ ಇಲಾಖೆಗೆ ಪಾವತಿ ಮಾಡಿದ ನಂತರ ನಿಯಮಾನುಸಾರ ಹಸ್ತಾಂತರ ಕ್ರಮ ಕೈಗೊಳ್ಳಲಾಗುವುದು.

ಬಳ್ಳಾರಿ–ಹೊಸಪೇಟೆ ರಸ್ತೆ ದುರಸ್ತಿಗೊಳಿಸುವುದು

1794(2180); ಆನಂದ ಸಿಂಗ್ (ವಿಜಯನಗರ–ಬಳ್ಳಾರಿ)

ಅ) ಬಳ್ಳಾರಿ–ಹೊಸಪೇಟೆ ರಾಷ್ಟ್ರೀಯ ಹೆದ್ದಾರಿಯು ಸಂಚಾರಕ್ಕೆ ಯೋಗ್ಯವಲ್ಲದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯಲ್ಲಿ ದುರಸ್ತಿ ಮಾಡಿ ಸಂಚಾರಕ್ಕೆ ಯೋಗ್ಯ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಸಂಪೂರ್ಣ ಮಾಹಿತಿ ನೀಡುವುದು;

ಇ) ಕಳೆದ ಮೂರು ವರ್ಷಗಳಲ್ಲಿ ಈ ರಸ್ತೆಗೆ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಅನುದಾನದ ವಿವರಗಳನ್ನು ನೀಡುವುದು;

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಬಂದಿದೆ

ಆ) ಸದರಿ ರಸ್ತೆಯಲ್ಲಿ 2014–15ನೇ ಸಾಲಿನಲ್ಲಿ 13.60 ಕಿ.ಮೀ. ನಿಯತಕಾಲಿಕ ನವೀಕರಣ ಕಾಮಗಾರಿ ಮತ್ತು 33.25 ಕಿ.ಮೀ. ಉದ್ದದ ರಸ್ತೆಯನ್ನು (ಆಯ್ದ ಭಾಗಗಳಲ್ಲಿ) ದುರಸ್ತಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಲಾಗಿರುತ್ತದೆ; ಮತ್ತು ಸದರಿ ರಸ್ತೆಯ ಆಯ್ದ ಭಾಗಗಳಲ್ಲಿ ಸುಮಾರು 59.00 ಕಿ.ಮೀ. ಉದ್ದದ ರಸ್ತೆಯನ್ನು ದುರಸ್ತಿಪಡಿಸಲು ₹ 11.36 ಕೋಟಿ ವೆಚ್ಚದ ಅಂದಾಜು ಪಟ್ಟಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಸದರಿ ರಸ್ತೆಯ ಶಾಸ್ವತ ಪರಿಹಾರವಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹೊಸಪೇಟೆಯಿಂದ ಬಳ್ಳಾರಿ